ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಹಾರಾಡುವ ಕಿಂಗ್‌ಫಿಶರ್‌ಗೂ, ತೂರಾಡುವ ಕಿಂಗ್‌ಫಿಶರ್‌ಗೂ ವ್ಯತ್ಯಾಸವೇನು?*



ಒಂದರಿಂದ ಅತಿ ವೇಗ, ಇನ್ನೊಂದರಿಂದ ತಿಥಿ ಬೇಗ!

ಶಂಕರ ಎಸ್.ಜಿ.ಹುಲ್‌ಕಲ್

*ತುಂಬಾ ಶ್ರೀಮಂತ ಹುಡುಗಿಯರು ಕಾರ್ ಡ್ರೈವರ್ ಜೊತೆ ಓಡಿಹೋಗುತ್ತಾರಲ್ಲಾ, ಯಾಕೆ?*

ನನಗೂ ಅರ್ಥವಾಗಿಲ್ಲಪ್ಪ; ಕಾರೂ ಇದೆ, ಡ್ರೈವರ್ರೂ ಇದ್ದಾನೆ ಎಂದಾಗ ಓಡಿಹೋಗುವ ಬದಲು ಕಾರಲ್ಲೇ ಹೋಗಬಹುದಲ್ಲ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಆರಾಮ, ಹರಾಮ, ವಿರಾಮಗಳಲ್ಲಿ ನಿಮಗೆ ಯಾವ ರಾಮ ಬಲು ಇಷ್ಟ, ರಾಂಜೀ?*

ಮೂರೂ ಇಷ್ಟವೇ; ಸದನದಲ್ಲಿ ಆರಾಮ, ಮನೆಯಲ್ಲಿ ವಿರಾಮ, ವಿಡಿಯೋದಲ್ಲಿ ಅಮಿತಾಭ್ – ರಾಜೇಶ್ ಖನ್ನರ ನಮಕ್– ಹರಾಮ!

ಮುರಲೀಧರ ಕುಲಕರ್ಣಿ, ಬೀದರ್

*ಹೂದಾನಿಯಲ್ಲಿ ಹೂ, ಅತ್ತರದಾನಿಯಲ್ಲಿ ಅತ್ತರ್ ಇರುವಂತೆ ಮಚ್ಛರದಾನಿಯಲ್ಲಿ ಸೊಳ್ಳೆಗಳೇಕೆ ಇರುವುದಿಲ್ಲ?*

ಹೂ, ಅತ್ತರ್ ಸ್ಥಾವರ, ಸೊಳ್ಳೆ ಜಂಗಮ. ಸ್ಥಾವರಕ್ಕುಳಿವುಂಟು, ಜಂಗಮಕ್ಕುಳಿವಿಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು

*ದೇವರ ರಥದೆಡೆಗೆ ಬಾಳೆಹಣ್ಣು ಒಗೆಯುತ್ತಾರೆ. ಚುನಾವಣಾ ರಥದೆಡೆಗೆ...?*




ಸಿಪ್ಪೆ!

ಮೇಟಿ ಕೊಟ್ರಪ್ಪ, ಬಸರಕೋಡು

*ಇಲ್ಲೊಬ್ಬ ನಾರಿಗೆ ಲಾರಿ ಎನ್ನುತ್ತಾರಲ್ಲಾ...?*

ಪಾಪ! ಕುಡುಕ ಗಂಡನ ಹೆಂಡತಿಯಂತೆ, ದೊಡ್ಡ ಸಂಸಾರದ ದೊಡ್ಡ ಲೋಡ್ ಒಬ್ಬಳೇ ಹೊತ್ತಿದ್ದಾಳಂತೆ!

ಪಿ.ಜೆ. ರಾಘವೇಂದ್ರ, ಮೈಸೂರು

*ಕಮಲಳಿಗೆ ಆಪರೇಷನ್ ಮಾಡ್ಸಿದ್ರೂ ಕೆಜೆಪಿ ಹೇಗೆ ಹುಟ್ಟಿತು?*

ಕಮಲಳಿಗೆ ಆಗಿತ್ತು, ಅವಳ ಒಡೆಯನಿಗೆ ಆಗಿರಲಿಲ್ಲವಲ್ಲಾ...!

ಗೀತಾ ಬರ್ಲ, ಬೆಂಗಳೂರು

*ರಾಜಕಾರಣಿಗಳು ಪದೇ ಪದೇ ಪಕ್ಷ ಬದಲಾಯಿಸುವುದೇಕೆ?*

ನಾಯಿ–ಕರು ಎಂದರೆ ಹಾಗೆಯೇ ಯಾರು ಶಿಳ್ಳೆ ಹೊಡೆದು ಕರೆದು ಬಿಸ್ಕತ್ ಹಾಕುತ್ತಾರೋ ಅವರಿಗೇ ಬಾಲ ಅಲ್ಲಾಡಿಸುವುದು!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.

*ನ್ಯಾಯಾಲಯಗಳಲ್ಲಿ ಸತ್ಯವನ್ನೇ ಹೇಳುತ್ತೇನೆ ಎಂದು ಪ್ರಮಾಣ ಮಾಡಿಸಿದ ನಂತರ ವಕೀಲರ ಅವಶ್ಯಕತೆ ಏನಿದೆ?*

ಅದು ಹೇಗೆ ಸತ್ಯ ಹೇಳಿಬಿಡುತ್ತಾರೆ ಎಂದು ನೋಡಿಬಿಡಲು!

ಎಚ್.ಆರ್. ದೇಸಾಯಿ, ರಾಯಚೂರು

*ಬೆನ್ನಿಗೆ ಚೂರಿ ಹಾಕುವವರಿಗೂ, ಹೊಟ್ಟೆಗೆ ಚೂರಿ ಹಾಕುವವರಿಗೂ ಏನು ವ್ಯತ್ಯಾಸ?*

ಬೆನ್ನಿಗೆ ಚೂರಿ ಹಾಕುವವರು ಕೇವಲ ಪ್ರಾಣವನ್ನು ಸೆಳೆಯುತ್ತಾರೆ, ಹೊಟ್ಟೆಗೆ ಚೂರಿ ಹಾಕುವವರು ಪ್ರಾಣದೊಂದಿಗೆ ಕಿಡ್ನಿಯನ್ನೂ ಸೆಳೆಯಬಹುದು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ತೀರ್ಥಕ್ಷೇತ್ರಕ್ಕಿಂತಲೂ ಮಿಗಿಲಾದುದು ಯಾವುದು?*

ಪ್ರಸಾದಕ್ಷೇತ್ರ!

ಆರಿಫ್, ದಾವಣಗೆರೆ

*ಪ್ರೀತೀನ ಪ್ರಾಮಾಣಿಕವಾಗಿ ಮಾಡುವುದು ಹುಡುಗರೋ ಅಥವಾ ಹುಡುಗಿಯರೋ?*

ವಿವೇಕಾನಂದ, ಪೈಗಂಬರ್, ಏಸುಕ್ರಿಸ್ತ, ಬುದ್ಧನಂತಹವರು. ಮಿಕ್ಕವರದ್ದೆಲ್ಲಾ ಕಾಮ ಮಿಕ್ಸ್ಡ್ ಪ್ರೇಮ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ನಾಯಿಗಳಿಗಿರುವ ನಿಯತ್ತು, ಪ್ರಾಮಾಣಿಕತೆ ಈ ಮನುಷ್ಯರಿಗಿದ್ದಿದ್ದರೆ...?*

ಗುಡ್ ಐಡಿಯಾ. ನೀವೇ ಏಕೆ ಈ ವಿಚಾರದಲ್ಲಿ ಮುಂದಾಳಾಗಬಾರದು?

ಪಿ.ಎಸ್.ಶ್ರೀವತ್ಸ, ಬೆಂಗಳೂರು

*ಮರಣ: ಇದರ ನಿಜವಾದ ಅರ್ಥ?*

ಚಟ್ಟ ಕಟ್ಟುವವನಿಗೆ, ಹಳ್ಳ ತೋಡುವವನಿಗೆ, ಪೆಟ್ಟಿಗೆ ಮಾಡುವವನಿಗೆ ಜೀವನ!

## ಬಹುಮಾನಿತ ಪ್ರಶ್ನೆ

ಜಿ. ವಿಶ್ವನಾಥ, ಗೊಂಡೇದಹಳ್ಳಿ

*ಬದುಕಿದ್ದಾಗ ಇಬ್ಬರಿಗೆ ಹಿಡಿ ಅನ್ನ ಹಾಕದ ಮಕ್ಕಳು ಸತ್ತಾಗ ಹಲವರಿಗೆ ಮೃಷ್ಟಾನ್ನ ಹಾಕಿಸುತ್ತಾರಲ್ಲ?*

ಅವರದು ಶ್ರೇಷ್ಠ ಗುಣ; ಇದ್ದಾಗಿನ ದುಃಖವನ್ನು ಯಾರಲ್ಲೂ ಹಂಚಿಕೊಳ್ಳದೆ, ಹೋದಾಗಿನ ಸಂತೋಷವನ್ನು ಹಂಚಿಕೊಳ್ಳುತ್ತಾರೆ!

ಶಿವಕುಮಾರ, ಕಬಾಡಗೇರಾ

*ಸುಖಸಂಸಾರಕ್ಕೆ ಈಗಲೂ ಹನ್ನೆರಡು ಸೂತ್ರಗಳು ಬೇಕೆ?*

ಹಾಗೆಲ್ಲಾ ಸುಖಸಂಸಾರ ಎಂದು ಒಟ್ಟಿಗೆ ಬರೆಯಬಾರದು ಕುಮಾರ. ಸುಖವೇ ಬೇರೆ, ಸಂಸಾರವೇ ಬೇರೆ!

ಎ.ರಾಜ್‌ಕುಮಾರ್, ವಾಣಿವಿಲಾಸಪುರ

*ಗಂಡಿಗೆ ಮೀಸೆ ಇಷ್ಟ ಇಲ್ಲ, ಹೆಣ್ಣಿಗೆ ಉಡುವ ಸೀರೆ ಇಷ್ಟ ಇಲ್ಲ. ಹಾಗಾದರೆ ನಿಮಗೆ?*

ಸೀರೆ ಉಟ್ಟು ಮೀಸೆ ಬಿಟ್ಟಿರುವ ಹೆಣ್ಣು ಇಷ್ಟ ಇಲ್ಲ!

ಮಹೇಶ ಈರಣ್ಣ, ಲಿಂಗಸೂಗೂರು

*ಮಾನವರಾಗದೆ ಹಾಗೆಯೇ ಉಳಿದ ಮಂಗಗಳು ಏನು ಯೋಚಿಸುತ್ತಿರಬಹುದು?*



ಮಾರ್ಪಾಡಾಗಿ ಮರ್ಡರ್, ಮಾನಭಂಗ ಮಾಡೋ ಮಾನವರಿಗಿಂತ ಮಾರ್ಪಾಡಾಗದೆ ಮರಹತ್ತಿ ಮರ್ಯಾದೆಯಾಗಿರೋ ಮಂಗಗಳೇ ವಾಸಿ ಅಂತ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ನೀವು ಬಹಳ ಜನಪ್ರಿಯರೋ (ಬಿಜೆಪಿ), ಅಥವಾ ಕಡಿಮೆ ಜನಪ್ರಿಯರೋ (ಕೆಜೆಪಿ) ಗುರುವರ್ಯಾ?*

ನಗೆಗಾರರ ದಂಡಿಗೆ ಆತ್ಮೀಯ (ಎನ್‌ಡಿಎ)!

ಎಚ್.ಆನಂದ್ ಕುಮಾರ್, ಚಿತ್ರದುರ್ಗ

*ರಾಸಲೀಲೆಯ ರಾಜಕಾರಣಿಗಳಿಗೆ ಯಾವ ಶಿಕ್ಷೆ ಶಿವ?*

ಏನೇನೂ ಇಲ್ಲ; ರಾಸಲೀಲೆ ರಾಜಕಾರಣಿಗಳ ಕ್ರೈಮ್ ಅಲ್ಲ, ಕ್ವಾಲಿಫಿಕೇಷನ್ನು!

■ ರಾಮ್